**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ದೇವದುರ್ಗ.**

**CC No.723/2024**

**CW -1 PW-1**

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಹೋನ್ನಯ್ಯ |
| ತಂದೆ | ಃ | ಹನುಮಂತಾ |
| ವಯಸ್ಸು | ಃ | 60 |
| ಉದ್ಯೋಗ | ಃ | ಕುರಿಕಾಯುವುದು |
| ವಾಸಸ್ಥಳ | ಃ | ಕಂಬದಾಳ್ |
| ಪ್ರಮಾಣಿಕರಿಸಿದ ದಿನಾಂಕ | ಃ | **22-01-2026** |

---

**<u>ಮುಖ್ಯ ವಿಚಾರಣೆ:-</u> ಮಾನ್ಯ ಸ.ಸ.ಅ ರವರಿಂದ**

ನಾನು ಕುರಿಗಳನ್ನು ಹೊಂದಿದ್ದು ಸದರಿ ಕುರಿಗಳನ್ನು ಕಾಕರಗಲ್ ಗ್ರಾಮದ ಹನುಮಂತ್ರಾಯನ ಜಮೀನಿನಲ್ಲಿ ಇಟ್ಟಿದ್ದು ಈಗ 2 ವರ್ಷಗಳ ಹಿಂದೆ ರಾತ್ರಿ ಮಳೆ ಬರುತ್ತಿದ್ದಾಗ 12 ಕುರಿಗಳು ಯಾರೋ ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ. ಸದರಿ ಕಳ್ಳತನವಾಗಿರುವ ವಿಚಾರ ರಾತ್ರಿ 1-00 ಗಂಟೆ ಸುಮಾರಿಗೆ ಗೊತ್ತಾಗಿರುತ್ತದೆ. ಸದರಿ ಕುರಿಗಳನ್ನು ಅಗ್ಗದ ಬಲಿಯಲ್ಲಿ ಹಾಕಿದ್ದು ಅಗ್ಗವನ್ನು ಬಿಚ್ಚಿ ಕೆಳಗೆ ಸರಿ ಕುರಿಗಳನ್ನು ಹೊಡೆದುಕೊಂಡು ಹೋಗಿದ್ದು. ಸದರಿ ದೊಡ್ಡಿಯ ಹತ್ತಿರ ನಾನು ಮಲಗಿದ್ದು ಮಳೆ ಬರುತ್ತಿದ್ದುದರಿಂದ ಮಳೆಯ ಶಬ್ದದಲ್ಲಿ ನನಗೆ ಕಳ್ಳತನವಾಗಿದ್ದು ಗೊತ್ತಾಗಿರುವುದಿಲ್ಲ. ನಂತರ ಸುತ್ತ ಮುತ್ತಾ ಹುಡಿಕಾಡಿ ನೋಡಲು ಕುರಿಗಳು ಸಿಕ್ಕಿರುವುದಿಲ್ಲ ಗಬ್ಬೂರು ಪೊಲೀಸ್ ಠಾಣೆಗೆ ದೂರನ್ನು ನೀಡಿರುತ್ತೇವೆ. ಕಳ್ಳತನವಾದ 1 ವರ್ಷದ ನಂತರ ಪೊಲೀಸರು ಇಬ್ಬರನ್ನು ಕರೆದುಕೊಂಡು ಬಂದು ನಿಮ್ಮ ಕುರಿಗಳನ್ನು ಇವರೇ ಕಳ್ಳತನ ಮಾಡಿರುತ್ತಾರೆ ಎಂದು ತೋರಿಸಿ ಸ್ಥಳದಲ್ಲಿ ಪೋಟೋಗಳನ್ನು ತೆಗೆದಿರುತ್ತಾರೆ. ಸಾಕ್ಷಿ ಪೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ದೂರಿಗೆ ಹೆಬ್ಬೆರಳಿನ ಗುರುತನ್ನು ಹಾಕಿರುತ್ತೇನೆ. ನ್ಯಾಯಾಲಯದ ಮುಂದಿರು ಆರೋಪಿತರಲ್ಲಿ ಸದರಿ ಪಂಚನಾಮೆಗೆ ಕರೆತಂದ ಇಬ್ಬರು ಆರೋಪಿಗಳನ್ನು ನನಗೆ ಈಗ ಗುರುತಿಸಲು ಆಗುವುದಿಲ್ಲ.

<u>ಪಾಟೀ ಸವಾಲು:- ಆರೋಪಿತರ ಪರ ಶ್ರೀ. ವಿ.ಡಿ.ಸಿ ವಕೀಲರಿಂದ.</u>

ನನ್ನದು ಕಂಬದಾಳ್ ಗ್ರಾಮ ಆಗಿರುತ್ತದೆ. ಕಳ್ಳತನ ಆಗುವ 2-3 ತಿಂಗಳ ಮೊದಲು ದೊಡ್ಡಿಯನ್ನು ಹಾಕಿದ್ದೆ. ನಾನು ಯಾರ ಜಮೀನಿನಲ್ಲಿ ದೊಡ್ಡಿ ಹಾಕಿದ್ದೆ ಎಂದು ನನಗೆ ನೆನಪಿರುವುದಿಲ್ಲ. ನಾನು ದೊಡ್ಡಿಯಲ್ಲಿ ಒಬ್ಬನೆ ಇರುತ್ತಿದ್ದೆ.

ದೊಡ್ಡಿಯಿಂದ ಅಂದಾಜು 1 ಕಿ.ಮೀ ಒಳಗೆ ದಾರಿ ಇರುತ್ತದೆ. ಬೀಳು ಜಮೀನಿನಲ್ಲಿ ದೊಡ್ಡಿ ಹಾಕಿದ್ದೆ. ನಾನು ಕುರಿಗಳನ್ನು ಮೇಹಿಸಲು ಕರೆದುಕೊಂಡು ಬಂದು ಸದರಿ ಬೀಳು ಜಾಗೆಯಲ್ಲಿ ದೊಡ್ಡಿ ಹಾಕಿದ್ದೆ. ದೊಡ್ಡಿ ಹಾಕಿದ ಸುತ್ತ ಮುತ್ತಾ ಬೆಳೆಗಳು ಇರುವುದಿಲ್ಲ 2-3 ಮನೆಗಳು ಇರುತ್ತವೆ. ಕುರಿಗಳು ದೊಡ್ಡಿಯಿಂದ ಅಂದಾಜು ಅರ್ದ ಕಿ.ಮೀ ಸುತ್ತಮುತ್ತ ಮೇಯುತ್ತವೆ. ಮುಖ್ಯ ರಸ್ತೆಯಿಂದ ದೊಡ್ಡಿಗೆ ಹೋಗಲು ಕಾಲುದಾರಿ ಇರುತ್ತದೆ. ಮುಖ್ಯ ರಸ್ತೆಯಿಂದ ದೊಡ್ಡಿಗೆ ನೇರವಾಗಿ ದೊಡ್ಡ ವಾಹನಗಳು ಬರುವುದಿಲ್ಲ ಅಂದರೆ ಸರಿ. ಶಾಹಪೂರ್ ಮತ್ತು ಬಳಿಚಕ್ರ ಸಂತೆಗಳಲ್ಲಿ ಕುರಿಗಳನ್ನು ಹುಡಿಕಿರುತ್ತೇನೆ. ಕಳುವಾದ 1 ತಿಂಗಳ ನಂತರ ದೂರನ್ನು ನೀಡಿರುತ್ತೇನೆ. ದೂರು ನೀಡಿದ ದಿನಾಂಕ, ತಿಂಗಳು ನೆನಪಿರುವುದಿಲ್ಲ. ಪೊಲೀಸರಿಗೆ ನಾನು ಹೇಳಿಕೆ ದೂರನ್ನು ನೀಡಿರುತ್ತೇನೆ. ಪಂಚನಾಮೆ ಮಾಡಿದ ದಿನಾಂಕ ಮತ್ತು ತಿಂಗಳು ನೆನಪಿರುವುದಿಲ್ಲ. ಘಟನಾ ಸ್ಥಳದ ಚಕ್ ಬಂದಿ ಹೇಳಲು ಬರುವುದಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳುನಿಂದ ಕೂಡಿರುತ್ತವೆ ಅಂದರೆ ಸರಿಯಲ್ಲ.

ಮರುವಿಚಾರಣೆ:- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ.ಸರಿ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,
ದೇವದುರ್ಗ.